
# ರೈತನ ಮಗನು





ಸಚಿನ ಚವ್ಹಾಣ

# ರೈತನ ಮಗನು



(ಕವನ ಸಂಕಲನ)

ಸಚಿನ್ ಚವ್ಹಾಣ್

: ಪ್ರಕಾಶನ :

ಚವ್ಹಾಣ್ ಪ್ರಕಾಶನ, ಲಿಂಗದಳ್ಳಿ

2023

# ಲೇಖಕರ ನುಡಿ

ಸ್ವಾರ್ಥದಿಂದ ತುಂಬಿರುವ ಈ ಜಗತ್ತಿನಲ್ಲಿ ಬಡ ರೈತನ ಮಗನೂ ಕೂಡಾ ಸಾಹಿತ್ಯ ಕ್ಷೇತ್ರದಲ್ಲಿ ತನ್ನ ಮನದಾಳದ ಮಾತುಗಳನ್ನು ಈ ಜಗತ್ತಿಗೆ ತನ್ನ ಮೊದಲ ಕವನ ಸಂಕಲನವಾದ **"ರೈತನ ಮಗನು"** ಕವನ ಸಂಕಲನ ನೀಡಿದೆ.

ಕಷ್ಟ ಪಡದೆ ಸುಖ ಸಿಗಲಿ ಎಂದು ಬಯಸುವ ಜನರ ಮಧ್ಯದಲ್ಲಿ ನನ್ನ ಕವನಗಳು ಬರದ ಹಂಚಿನ ಮೇಲೆ ಬೆಂದು ಹೊರ ಬಂದಿವೆ. ಈ ನನ್ನ ಕಾವ್ಯದಲ್ಲಿ ರೈತನ ಮಗನು ಸಂಕಷ್ಟ ಅಡಗಿರುವುದ, ಪ್ರೀತಿ ಪ್ರೇಮಕ್ಕೆ ಮರಳು ಹೋಗುತ್ತಿರುವ ಯುವಕರು ಮತ್ತು ಬೇಸಿಗೆ ಸಂಕಷ್ಟ, ಮಳೆ ರೈತನ ಸಂಜೀವಿನಿ ಎಂಬುವುದು ಈ ಕಾವ್ಯ ಭಾಗದ ಮೂಲಕ ವ್ಯಕ್ತಪಡಿಸಿದ್ದೇನೆ.

ಪ್ರತಿಭೆ ಎಂಬುವುದು ರೈತನ ಮನೆಯಲ್ಲಿ ಅರಳುತ್ತದೆ ಹೊರತು ಶ್ರೀಮಂತನ ಮನೆಯಲ್ಲಿ ಅಲ್ಲ. ನನ್ನನ್ನು ಪ್ರೀತಿಯಿಂದ ಪ್ರೋತ್ಸಾಹಿಸಿ ಈ ಕೃತಿಗೆ ದಾನಕರಾದ ಗಣಪತಿ ಜ್ಯುವೆಲರ್ಸ್ ನಿರ್ಮಾಪಕರಾದ ಶ್ರೀ ಅಶೋಕ್ ಚವ್ಹಾಣ, ಮತ್ತು ಜೈ ಪ್ರಕಾಶ್ ಚವ್ಹಾಣ, ಮೋತಿಲಾಲಾ ಚವ್ಹಾಣ ಅವರಿಗೆ ನನ್ನ ಹೃದಯ ತುಂಬಿ ವಂದಿಸುತ್ತೇನೆ. ನನ್ನ ಪ್ರೀತಿಯ ಗುರುಗಳು ಡಾ.ಶ್ರೀನಿವಾಸ್ ದೊಡ್ಡಮನಿ ಹಾಗೂ ಮಲಿಕ್ ಜಮಾದಾರ್. ಪ್ರೇರಣೆ ನೀಡಿದ ಗೆಳೆಯ ಅಂಬರೀಶ್.ನಾಯ್ಕೋಡಿ, ಪ್ರಕಾಶ ಬನಸೋಡೆ ಅವರಿಗೆ ನಾನು ಆಭಾರಿಯಾಗಿದ್ದೇನೆ. ಅದರಂತೆ ತಾವು ನಡೆಯುವ ದಾರಿಯಲ್ಲಿ ಜೊತೆ ಕರೆದುಕೊಂಡು ಕಾವ್ಯ ಕಟ್ಟುವ ಕಲೆ ಕಲಿಸುತ್ತಾ ಕಾವ್ಯದ ಕೃಷಿಯಲ್ಲಿ ತೊಡಗಿಸಿದ ಶ್ರೀ ಸಾಯಬಣ್ಣ ಮಾದರ್ ಅವರನ್ನು ಸ್ಮರಿಸುತ್ತೇನೆ.

ನನ್ನ ಪ್ರತಿ ಬರವಣಿಗೆಗೆ ಪ್ರೋತ್ಸಾಹಿಸಿ ಪ್ರತಿ ಬಾರಿ ಹುರಿದುಂಬಿಸುವ ನನ್ನ ಪ್ರೀತಿಯ ಗೆಳೆಯರಾದ ಕುಮಾರಸ್ವಾಮಿ ಲೋಣಿ, ಶಿವಾನಂದ ಪೂಜಾರಿ, ಮಲ್ಲಿಕಾರ್ಜುನ, ಅಭಿಷೇಕ ಗಳವೆ, ಭೀಮಶಂಕರ್, ಅಭಿಷೇಕ್ ಬಿಸನಕ್ಕಿ, ಈರಣ್ಣ, ಆಕಾಶ ರಾಠೋಡ್, ರಾಹುಲ್ ಚವಾಣ್, ಅವರಿಗೆ ನಾನು ಕೃತಜ್ಞತೆ ಅರ್ಪಿಸುತ್ತೇನೆ. ನನ್ನ ಕೆಲಸ ಕಾರ್ಯದಲ್ಲಿ ಪ್ರೋತ್ಸಾಹಿಸುವ ನನ್ನ ಪ್ರೀತಿಯ ತಂದೆ ಮಾದೇವ ಚವ್ಹಾಣ, ತಾಯಿ ಕಸ್ತೂರಿಬಾಯಿ ಚವ್ಹಾಣ ನನ್ನ ಪ್ರೀತಿಯ ಅಣ್ಣ ಚೇತನ್ ಚವ್ಹಾಣ ಪ್ರೀತಿಯ ಅಕ್ಕಾ ಪುಟ್ಟಕ್ಕಾ, ಲಲಿತಾ ಅವರಿಗೆ ವಂದಿಸುತ್ತೇನೆ.

ಸುಂದರವಾದ ಡಿಟಿಪಿ ಮಾಡಿಕೊಟ್ಟ ಮಲ್ಲಿಕಾರ್ಜುನ್ ರಡ್ಡಿ, ಆಕರ್ಷಕ ಮುಖಪುಟ ವಿನ್ಯಾಸಗೊಳಿಸಿದ ಡಾ.ಶ್ರೀನಿವಾಸ ದೊಡ್ಡಮನಿ ಹಾಗೂ ಚವ್ಹಾಣ್ ಪ್ರಕಾಶನದ ಸರ್ವ ಮಂಡಳಿಗೂ ಅನಂತ ಕೃತಜ್ಞತೆಗಳು.

**ಸಚಿನ್ ಚವ್ಹಾಣ**
ಯುವ ಸಾಹಿತಿ (ಲಿಂಗದಳ್ಳಿ)
ಬಿ.ಎ ಅಂತಿಮ ವರ್ಷದ ವಿದ್ಯಾರ್ಥಿ
ಬಿ.ಎಲ್.ಡಿ.ಇ ಸಂಸ್ಥೆಯ ಎಸ್. ಬಿ. ಕಲಾ ಮತ್ತು
ಕೆ. ಸಿ. ಪಿ. ವಿಜ್ಞಾನ ಮಹಾವಿದ್ಯಾಲಯ, ವಿಜಯಪುರ



**ಯುವ ಸಾಹಿತಿ**

**ಸಚಿನ ಚವ್ಹಾಣ್**

## ಚೊಚ್ಚಲ "ರೈತನ ಮಗನು"

## ಕವನ ಸಂಕಲನ ಯುವ ವಿದ್ಯಾರ್ಥಿಗಳಿಗೆ ಪ್ರೇರಣೆ

ಹಳ್ಳಿಯಿಂದ ಬಂದ ಯುವ ಗ್ರಾಮೀಣ ಪ್ರತಿಭೆ ಸಾಹಿತ್ಯಕವಾಗಿ ಬೆಳೆದು ಯುವ ಪ್ರತಿಭೆಗೆ ಸ್ಫೂರ್ತಿಯಾಗಿರುವ ವಿದ್ಯಾರ್ಥಿ ಎಂದರೆ ಅದು ಸಚಿನ ಚವ್ಹಾಣ್.

ಹೌದು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿದ್ಯಾರ್ಥಿಯಾಗಿರುವ ಈತ ಪತ್ರಿಕೋದ್ಯಮದಲ್ಲಿ ವಿಶೇಷ ಆಸಕ್ತಿ ವಹಿಸಿ ಈ ವಿಷಯ ತೆಗೆದುಕೊಂಡು ಸತತ ಅಧ್ಯಯನಶೀಲನಾಗಿ ದಿನ ನಿತ್ಯ ಕವನಗಳ ಬರೆಯುವ ಪ್ರವೃತ್ತಿಯಾಗಿಸಿಕೊಂಡು,ಚೊಚ್ಚಲ ಕವನ ಸಂಕಲನ **'ರೈತನ ಮಗನು'** ಎಂಬ ಶಿರ್ಷಿಕೆಯಡಿ ಚುಟುಕು ಕವನ ಸಂಕಲನ ಮೊದಲ ಪ್ರಯತ್ನದಲ್ಲಿ ಕವನಗಳು ಸಂಗ್ರಹಿಸಿ ವಿದ್ಯಾರ್ಥಿ ದೆಸೆಯಲ್ಲೇ ಪ್ರಯತ್ನ ಈ ಪ್ರಯತ್ನ ಮಾಡಿದ್ದಾನೆ ನಿಜಕೂ ಶ್ಲಾಘನೀಯವಾದದ್ದು.

ಈ ಚೊಚ್ಚಲ ಕೃತಿಯು ಯುವ ಪ್ರತಿಭೆಗಳಿಗೆ ಪ್ರೇರಣೆಯಾಗುವುದಲ್ಲದೆ ಯುವ ಬರಹಗಾರರಿಗೆ ಸಾಹಿತ್ಯಕವಾಗಿ ಅಭಿರುಚಿಯನ್ನು ಇಮ್ಮಡಿಗೊಳಿಸಿದ್ದಾನೆ, ಈತನ ಅಭಿರುಚಿಯನ್ನು ಗುರುತಿಸಿ ಕನ್ನಡ ವಿಭಾಗದ ಮುಖ್ಯಸ್ಥರಾಗಿರುವ ಡಾ.ಶ್ರೀನಿವಾಸ ದೊಡ್ಡಮನಿ ಗುರುಗಳು ಸೂಕ್ತ ಸಲಹೆಯ ಮೆರೆಗೆ ಪ್ರಯತ್ನ ಯಶಸ್ವಿಯಾಗಲು ಸಾಧ್ಯವಾಯಿತು. ಮಹಾವಿದ್ಯಾಲಯದ ಯುವ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಹಾಗೂ ಎಲ್ಲ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಿದ್ದಾನೆಂದು ಹೇಳಲು ಸಂತೋಷವನಿಸುತ್ತದೆ.

ಬಿ.ಎಲ್.ಡಿ.ಇ ಸಂಸ್ಥೆಯ ಎಸ್.ಬಿ ಮತ್ತು ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿದ್ಯಾರ್ಥಿಯಾಗಿರುವ ಈತ ಪತ್ರಿಕೋದ್ಯಮದಲ್ಲಿ ವಿಶೇಷ ಆಸಕ್ತಿಯಿಂದ ಹೆಸರಾಂತ ಪತ್ರಿಕಗಳಲ್ಲಿ ವಿವಿಧ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಪ್ರಕಟಗೊಂಡಿವೆ, ಈತನ ಈ ಲೇಖನಗಳ ಪ್ರಕಟಣೆಯೇ ಈ ಕವನ ಸಂಕಲಕ್ಕೆ ಪ್ರೇರಣೆಯಾಗಿದೆ. ಸತತ ಪರಿಶ್ರಮ ಓದುವ ಹಾಗೂ ಬರೆಯುವ ಹವ್ಯಾಸವನ್ನು ಮೈಗೂಡಿಸಿಕೊಂಡು ಸಚಿನ್ ಚವ್ಹಾಣ್ ಕಲಿಕಾ ಹಂತದಲ್ಲಿ ಇಂತಹ ಒಂದು ಸಣ್ಣ ಪ್ರಯತ್ನ ಮಾಡಿದ್ದಾನೆ ಕಳೆದ ವರ್ಷ ಇದೇ ರೀತಿ ಯುವ ಬರಹಗಾರ ಪತ್ರಿಕೋದ್ಯಮ ವಿದ್ಯಾರ್ಥಿ ಅಂಬರೀಷ್ ನಾಯ್ಕೊಡಿ ನನ್ನ ವಿದ್ಯಾರ್ಥಿ[illegible] ಪಡೆದ ಈತ ತಾನು ಸಹ ಇಂತಹ ಪ್ರಯತ್ನಕ್ಕೆ ಕೈ ಹಾಕಿದ್ದಾನೆ ನಿಜಕ್ಕೂ ನನಗೆ ಸಂತೋಷವೆನಿಸುತ್ತದೆ.

**'ರೈತನ ಮಗನು'** ಎಂಬ ಶೀರ್ಷಿಕೆಯಡಿಯಲ್ಲಿ ಹೊರಹೊಮ್ಮುತ್ತಿರುವ ಕವನ ಸಂಕಲನದಲ್ಲಿ ಒಟ್ಟು 41 ಕವಿತೆಗಳಿದ್ದು ಅದರಲ್ಲಿ ಬರುವ ಎಲ್ಲಾ ಕವಿತೆಗಳು ವೈಯಕ್ತಿಕ ಬದುಕಿಗೆ ಹತ್ತಿರವಾಗುವಂತಿವೆ. ಇಲ್ಲಿ ಬರುವ ಕವಿತೆಗಳು ಹೀಗಿವೆ, ಭೂತಾಯಿ, ದೇಶಪ್ರೇಮ, ಸಿದ್ದೇಶ್ವರ ಶ್ರೀಗಳು, ಸಂಸ್ಕೃತಿ, ಸೇರಿದಂತೆ ವೈಚಾರಿಕತೆಯುಳ್ಳ ಹಲವು ಕವಿತೆಗಳಾಗಿದ್ದು ಈತನ ಕವಿತೆಯಲ್ಲಿ ಅತ್ಯದ್ಭುತವಾದ ವ್ಯಾಕರಣ ರಚನೆ, ಪ್ರಾಸ ಪದಗಳ ಜೋಡನೆ, ಅತ್ಯುತ್ತಮ ಕವಿತೆ ರಚನೆ ಮೊದಲ ಪ್ರಯತ್ನದಲ್ಲಿ ನಿಜಕ್ಕೂ ಅದ್ಭುತವಾದ ಪ್ರಯತ್ನ ಮಾಡಿದ್ದಾನೆ. ಇಂದಿನ ಆಧುನಿಕ ಯುಗದಲ್ಲಿನ ಯುವಕರಿಗೆ ಪ್ರೇರಣೆಯಾಗುವಂತಿದೆ.ಇಂದಿನ ಯುವಕರು ಸದಾ ಮೊಬೈಲ್ ನಲ್ಲಿ ನಿರತನಾಗಿ ಅಧ್ಯಯನದಿಂದ ವಂಚಿರಾಗುತ್ತಿದ್ದಾರೆಂಬ ಕಳವಳ. ಅಂತಹದರಲ್ಲಿ ಯುವಕರಿಗೆ ಈತನು ಪ್ರೇರಣೆಯಾಗಲಿ ಎಂಬ ನನ್ನ ಆಶಯ.

ಎಲ್ಲ ವಿದ್ಯಾರ್ಥಿಗಳಲ್ಲಿ ಒಂದು ಪ್ರತಿಭೆ ಹುದುಗಿರುತ್ತದೆ ಅದರಂತೆ ಅದನ್ನು ಹೊರ ಜಗತ್ತಿಗೆ ಪರಿಚಯಿಸುವ ಪ್ರಯತ್ನ ಮಾಡಬೇಕು ಎಲ್ಲ ಯುವ ಪ್ರತಿಭೆಗಳು ಸತತ ಅಧ್ಯಯನ ಶೀಲರಾಗಿ ಬದುಕಿನಲ್ಲಿ ಉತ್ತಮ ಸ್ನೇಹಿತನೆಂದು ಬಿಂಬಿಸಿಕೊಳ್ಳುವ ಪುಸ್ತಕದ ಪ್ರೇಮಿಯಾಗಿ, ಸ್ನೇಹಿತನಾಗಿ ನಿರಂತರ ಅಧ್ಯಯನಶೀಲರಾಗಬೇಕಾಗಿದೆ. ಓದು ಕೇವಲ ಪಠ್ಯಕ್ಕೆ ಸೀಮಿತವಾಗದೇ ಜ್ಞಾನವೆಂಬ ದಾಹ ತೀರದಂತೆ ಸದಾ ಅಧ್ಯಯನಶೀಲರಾಗಿ ಉತ್ತಮ ಜ್ಞಾನವೃದ್ಧಿಸುವಲ್ಲಿ ಇಂದಿನ ವಿದ್ಯಾರ್ಥಿಗಳು ಒಂದು ಹೆಜ್ಜೆ ಮುಂದಿಡಬೇಕಾಗಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಪಠ್ಯಪುಸ್ತಕದ ಹೊರತಾಗಿಯೂ ಉತ್ತಮ ಕಾದಂಬರಿ, ಕಥೆ, ಕವನ, ನಾಟಕಗಳು ಹೀಗೆ ಹಲವಾರು ಸಾಹಿತ್ಯಿಕವಾಗಿ ನಮಗೆ ಜ್ಞಾನವನ್ನು ವೃದ್ಧಿಸುವಂಥಹ ಉತ್ತಮ ಪುಸ್ತಕಗಳನ್ನು ಸ್ನೇಹಿತರನ್ನಾಗಿಸಿಕೊಳ್ಳಬೇಕಾಗಿದೆ.

ಸಚಿನ್ ಚವ್ಹಾಣ್ ಇಂತಹ ವಿದ್ಯಾರ್ಥಿಗಳನ್ನು ಪಡೆದ ನಾನು ನಿಜಕೂ ನಾನು ಧನ್ಯನೆಂದು ಹೇಳಲು ಸಂತೋಷವೆನಿಸುತ್ತದೆ. ಮುಂದೆಯೂ ಇಂತಹ ಕವನ, ಕಥೆ, ಕಾದಂಬರಿ ಇನ್ನಷ್ಟು ಪುಸ್ತಕಗಳು ಬಿಡುಗಡೆಗೊಳಿಸಿ ಸಾಹಿತ್ಯ ಕ್ಷೇತ್ರದಲ್ಲಿ ಇನ್ನು ಬೆಳೆಯಲಿ ಎಂಬ ನನ್ನ ಆಶಯ.

**ಮಲಿಕ್.ಎಲ್. ಜಮಾದಾರ**
ಮುಖ್ಯಸ್ಥರು, ಉಪನ್ಯಾಸಕರು
ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ
ಬಿ.ಎಲ್.ಡಿ.ಇ. ಸಂಸ್ಥೆಯ ಎಸ್.ಬಿ ಕಲಾ ಮತ್ತು
ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯ ವಿಜಯಪುರ

**ರೈತನ ಮಗನು**
ಕವನ ಸಂಕಲನ
**ಚವ್ಹಾಣ ಪ್ರಕಾಶನ, ಲಿಂಗದಳ್ಳಿ**